ಕರ್ನಾಟಕ ವಿಧಾನಸಭೆ

ಬುಧವಾರ 16ನೇ ಜುಲೈ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು/ಉಪಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)

ಪೀಠವನ್ನು ಅಲಂಕರಿಸಿದ್ದರು

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಹಾಸನ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ಕುಡಿಯುವ ನೀರಿನ ಯೋಜನೆಯಲ್ಲಿ ದುರುಪಯೋಗ

372(2696): ಶ್ರೀ ಶಿವರಾಮು ಬಿ. (ಗಂಡಸಿ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ವಿಶ್ವಬ್ಯಾಂಕ್ ಯೋಜನೆಯ ಕುಡಿಯುವ ನೀರಿನ ಕಾಮಗಾರಿಗಳ (ಗ್ರಾಮಗಳ) ಸಂಖ್ಯೆ ಎಷ್ಟು; ಅನುಷ್ಠಾನಗೊಳಿಸಿರುವ ಕಾಮಗಾರಿಗಳೆಷ್ಟು;

ಆ) ಯೋಜನೆಯ ಅನುಷ್ಠಾನದಲ್ಲಿ ಕಳಪೆ ಕಾಮಗಾರಿ, ಗುಣಮಟ್ಟ ಮತ್ತು ಅಳತೆಯಲ್ಲಿ ವ್ಯತ್ಯಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ತೆಗೆದುಕೊಂಡಿರುವ ಕ್ರಮವೇನು; ಯಾವ ಪ್ರಮಾಣದ ಹಣ ಟೆಂಡರ್‌ಗಿಂತ ವ್ಯತ್ಯಾಸವಾಗಿರುತ್ತದೆ?

ಶ್ರೀ ಕೆ.ಬಿ. ಕೋಳೀವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):

ಅ) ಹಾಸನ ಜಿಲ್ಲೆಯ 96 ಗ್ರಾಮಗಳಲ್ಲಿ ವಿಶ್ವಬ್ಯಾಂಕ್ ಯೋಜನೆಯ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಂಡಿರಲಾಗಿರುತ್ತದೆ. ಕೈಗೊಂಡ ಎಲ್ಲಾ 96 ಗ್ರಾಮಗಳಲ್ಲಿಯೂ ಕಾಮಗಾರಿಗಳನ್ನು 1998-99 ರಿಂದ 2000-2001 ರವರೆಗೆ ಅನುಷ್ಠಾನಗೊಳಿಸಲಾಗಿರುತ್ತದೆ.

ಆ) ಹಾಸನ ಜಿಲ್ಲೆಯಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಕಳಪೆ ಕಾಮಗಾರಿ, ಗುಣಮಟ್ಟ ಮತ್ತು ಅಳತೆಯಲ್ಲಿ ವ್ಯತ್ಯಾಸವಾಗಿರುವ ಬಗ್ಗೆ ಸರ್ಕಾರಕ್ಕೆ ದೂರು ಬಂದಿರುತ್ತದೆ. ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಕುರಿತು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಈ ಯೋಜನೆಯಡಿಯಲ್ಲಿ ಗುತ್ತಿಗೆಗೆ ನೀಡಿರುವ ಎಲ್ಲಾ 96 ಗ್ರಾಮಗಳ 17 ಪ್ಯಾಕೇಜ್‌ಗಳ ಒಟ್ಟು ಮೂಲ ಗುತ್ತಿಗೆಯ ಮೊತ್ತವು ರೂ. 1390.28 ಲಕ್ಷಗಳು. ಆದರೆ ಇವುಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಪರಿಷ್ಕೃತ ಮೊತ್ತ ರೂ. 1732.94 ಲಕ್ಷಗಳೆಂದು ಅಂದಾಜು ಮಾಡಲಾಗಿದ್ದು, ಇದಕ್ಕೆ ಎದುರಾಗಿ ಈ ಎಲ್ಲಾ ಗುತ್ತಿಗೆ ಕಾಮಗಾರಿಗಳಿಗೆ ಈವರೆಗೆ ಒಟ್ಟು ರೂ. 1607.55 ಲಕ್ಷಗಳಷ್ಟು ಪಾವತಿಯಾಗಿರುತ್ತದೆ.

ಯೋಜನೆಯ ಅನುಷ್ಠಾನದ ಬಗ್ಗೆ ದೂರು ಬಂದಿದ್ದು, ಅವುಗಳನ್ನು ಸರಿಪಡಿಸಲು ಕಾರ್ಯಪಾಲಕ ಇಂಜಿನಿಯರ್, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಹಾಸನ ಹಾಗೂ ಚನ್ನರಾಯಪಟ್ಟಣ ಇವರಿಗೆ ತಿಳಿಸಲಾಗಿದೆ. ಗುತ್ತಿಗೆದಾರರ ಅಂತಿಮ ಬಿಲ್ಲುಗಳನ್ನು ತಯಾರಿಸಲಾಗುತ್ತಿದ್ದು, ಈ ಹಣವನ್ನು ಗುತ್ತಿಗೆದಾರರ ಅಂತಿಮ ಬಿಲ್ಲುಗಳಲ್ಲಿ ಕಡಿತಗೊಳಿಸಲು

ತಿಳಿಸಲಾಗಿದೆ. ಅಂತಿಮ ಬಿಲ್ಲು ತಯಾರಾದ ನಂತರವೇ ವ್ಯತ್ಯಾಸದ ಪ್ರಮಾಣ ಮೊತ್ತವನ್ನು ತಿಳಿಯಬಹುದಾಗಿರುತ್ತದೆ.

ಸಂಖ್ಯೆ – 2696ಕ್ಕೆ ನೀಡಿರುವ ಉತ್ತರದ ಅನುಬಂಧ

ಹಾಸನ ಜಿಲ್ಲೆಯ ಈ ಕೆಳಕಂಡ 6 ಗ್ರಾಮಗಳಲ್ಲಿ ಅನುಷ್ಠಾನಗೊಳಿಸಿರುವ ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯ ಕಾಮಗಾರಿಗಳು ಕಳಪೆ ಗುಣಮಟ್ಟದ್ದಾಗಿರುವುದಾಗಿ ಹಾಗೂ ಅಕ್ರಮ ಪಾವತಿಯಾಗಿರುವುದಾಗಿ ಸರ್ಕಾರಕ್ಕೆ ದೂರು ಬಂದಿರುತ್ತದೆ.

ಕ್ರ. ಸಂ.	ಗ್ರಾಮ	ತಾಲ್ಲೂಕು	ಕಾರ್ಯಾರಂಭಗೊಂಡ ಮತ್ತು ಹಸ್ತಾಂತರಿಸಲಾದ ದಿನಾಂಕ	ಪ್ಯಾಕೇಜ್	ಗುತ್ತಿಗೆದಾರರು
1.	ಗಂಡಸಿ	ಅರಸಿಕೆರೆ	20–5–2000/ 25–7–2000		
2.	ಮುಡ್ಡಿ	ಅರಸಿಕೆರೆ	15–3–2000/ 26–5–2000		ಮೆ: ಕೊರಮಂಡಲ್ ಪ್ರೆಸ್ಟಿಕ್ರೈಟ್(ಪ್ರೈ) ಲಿ.
3.	ಕೊಲಗುಂಡ	ಅರಸಿಕೆರೆ	18–2–2000/ 06–7–2000	ಹೆಚ್ಎ ಎಸ್–8	ಹೈದರಾಬಾದ್
4.	ಬಾಗೇಶ್ಪುರ	ಅರಸಿಕೆರೆ	30–6–1999/ 29–9–2000		
5.	ಕುಂದೂರು	ಚನ್ನರಾಯ ಪಟ್ಟಣ	15–3–2000/ 30–6–2000		
6.	ನುಗ್ಗೆಹಳ್ಳಿ	ಚನ್ನರಾಯ ಪಟ್ಟಣ	28–3–2000/ 28–7–2000		

ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಲು ಸರ್ಕಾರವು ಕೆಲವೊಂದು ಬ್ಯಾಹ್ಯ ಸಂಸ್ಥೆಗಳನ್ನು ನೇಮಿಸಿರುತ್ತದೆ. ಕಾಮಗಾರಿಗಳಲ್ಲಿ ಉಪಯೋಗಿಸಿರುವ ಪೈಪುಗಳ ಗುಣಮಟ್ಟವನ್ನು ಪರಿಶೀಲಿಸಲು ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಪ್ಲಾಸ್ಟಿಕ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (CIPET) ಮೈಸೂರು, ಇದನ್ನು ಮತ್ತು ಮೇಲ್ಕೊಟ್ಟಿ ನಿರ್ಮಾಣದ ಗುಣಮಟ್ಟವನ್ನು ಪರಿಶೀಲಿಸಲು ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್ (ಕೆ.ಇ.ಆರ್.ಎಸ್.) ಕೆ.ಆರ್. ಸಾಗರ, ಮಂಡ್ಯ, ಈ ಸಂಸ್ಥೆಯನ್ನು ನೇಮಿಸಲಾಗಿತ್ತು. CIPET, ಮೈಸೂರು ಸಂಸ್ಥೆಯು ಮೇಲೆ ತೋರಿಸಿರುವ ಆರು ಗ್ರಾಮಗಳ ಕಾಮಗಾರಿಗಳಲ್ಲಿ ಉಪಯೋಗಿಸಿರುವ ಪೈಪುಗಳ ಸ್ಯಾಂಪಲ್ಗಳನ್ನು ಪಡೆದು ಪರೀಕ್ಷಿಸಿ, ಕಾಮಗಾರಿಗಳಿಗೆ ಉಪಯೋಗಿಸಿರುವ ಪೈಪುಗಳ ಗುಣಮಟ್ಟ ತೃಪ್ತಿಕರವಾಗಿರುವುದೆಂದು ಧೃಡೀಕರಿಸಿರುತ್ತದೆ. ಅಂತೆಯೇ, ಕೆ.ಇ.ಆರ್.ಎಸ್., ಕೆ.ಆರ್. ಸಾಗರ, ಮಂಡ್ಯ, ಈ ಸಂಸ್ಥೆಯು ಪರಿಶೀಲನೆ ನಡೆಸಿ, ಮೇಲ್ಕೊಟ್ಟಿ ನಿರ್ಮಾಣದ ಗುಣಮಟ್ಟ / ಕಾಂಕ್ರೀಟ್‌ನ ಸಾಮರ್ಥ್ಯ ತೃಪ್ತಿಕರವಾಗಿರುತ್ತದೆ ಎಂದು ಧೃಡೀಕರಿಸಿರುತ್ತದೆ.

ಚನ್ನರಾಯಪಟ್ಟಣದ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗವು, ಕಾಮಗಾರಿಗಳಲ್ಲಿ ಅಳವಡಿಸಿರುವ ಪೈಪುಗಳ ಉದ್ದಳತೆಯನ್ನು ಪರಿಶೀಲಿಸಿ, ಅಳತೆ ಪುಸ್ತಕದಲ್ಲಿ ನಮೂದಿಸಿರುವ ಉದ್ದಳತೆಯು ವಾಸ್ತವಿಕವಾಗಿ ಕಾಮಗಾರಿಗಳಲ್ಲಿ ಅಳವಡಿಸಿರುವ ಉದ್ದಳತೆಗಿಂತ ಹೆಚ್ಚಿರುವುದಿಲ್ಲವೆಂದು ಮತ್ತು ಈ ಆರು ಗ್ರಾಮಗಳಲ್ಲಿ ಪೈಪುಗಳನ್ನು ಅಳವಡಿಸದೆ ಯಾವುದೇ ಪಾವತಿಯನ್ನು ದೂರಿನಲ್ಲಿ ತಿಳಿಸಿರುವಂತೆ ಕ್ಲೇಮು ಮಾಡಿರುವುದಿಲ್ಲವೆಂದು ವರದಿ ಮಾಡಿರುತ್ತದೆ. ಆದರೆ, ಹಲವು ಸ್ಥಳಗಳಲ್ಲಿ ಪೈಪುಗಳನ್ನು ನಿಗದಿತ ಆಳದಲ್ಲಿ ಹಾಕಿರುವುದಿಲ್ಲವೆಂದು ಮತ್ತು ಪೈಪುಗಳನ್ನು ಅಳವಡಿಸಲು ತೋಡಿರುವ ಆಳ ಮತ್ತು ಮಣ್ಣಿನ ಗುಣಮಟ್ಟದ ವರ್ಗೀಕರಣವು ಅಳತೆ ಪುಸ್ತಕದಲ್ಲಿ ನಮೂದಿಸಿರುವುದಕ್ಕೆ ತಾಳೆ ಹೊಂದುತ್ತಿಲ್ಲವೆಂದು ವರದಿ ಮಾಡಲಾಗಿರುತ್ತದೆ. ಆದಾಗ್ಯೂ, ಈ ಎಲ್ಲಾ ಆರು ಯೋಜನೆಗಳು ಪರಿವೀಕ್ಷಣಾ ಸಂದರ್ಭದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದುದಾಗಿ ತಿಳಿಸಲಾಗಿದೆ. ಆದರೆ, ಈ ಕಾಮಗಾರಿಗಳಲ್ಲಿ ಕೆಲವೊಂದು ಸಣ್ಣಪುಟ್ಟ ನ್ಯೂನತೆಗಳು ಉದಾಹರಣೆಗೆ ಮೇಲ್ತೊಟ್ಟಿಗಳು ತೇವದಿಂದ ಕೂಡಿರುವುದು, ವಾಲ್ವ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದು ಇತ್ಯಾದಿಗಳು ಕಂಡುಬಂದಿದ್ದು, ಇವುಗಳನ್ನು ಗುತ್ತಿಗೆದಾರರು ಮುಂದೆ ಸರಿಪಡಿಸಿರುತ್ತಾರೆ.

ಇದೇ ರೀತಿಯ ಪರಿವೀಕ್ಷಣೆ ಮತ್ತು ಪರಿಶೀಲನೆಯನ್ನು ಹಾಸನ ಜಿಲ್ಲೆಯ ಉಳಿದ ಎಲ್ಲಾ 90 ಗ್ರಾಮಗಳ ಕಾಮಗಾರಿಗಳಲ್ಲಿಯೂ ನಡೆಸಲಾಗಿರುತ್ತದೆ. ಪೈಪುಗಳನ್ನು ನಿಗದಿತ ಆಳದಲ್ಲಿ ಅಳವಡಿಸದೆ ಇದ್ದಂತಹ ಕೆಲವೊಂದು ಪ್ರಕರಣಗಳಲ್ಲಿ ಪೈಪುಗಳನ್ನು ಸರಿಯಾದ ಆಳದಲ್ಲಿ ಅಳವಡಿಸಲು ಮತ್ತು ಈ ಸಂಬಂಧ ವೆಚ್ಚವನ್ನು ಸಂಬಂಧಪಟ್ಟ ಗುತ್ತಿಗೆದಾರರ ಅಂತಿಮ ಬಿಲ್ಲುಗಳಲ್ಲಿ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗಿದೆ. ಹಾಸನ ಮತ್ತು ಚನ್ನರಾಯಪಟ್ಟಣ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು ನ್ಯೂನತೆಗಳನ್ನು ಸರಿಪಡಿಸುವುದಕ್ಕಾಗಿ ಕ್ರಮವಾಗಿ ರೂ. 1.08 ಲಕ್ಷ ಮತ್ತು ರೂ. 24.28 ಲಕ್ಷಗಳ ವೆಚ್ಚವನ್ನು ಮಾಡಿರುತ್ತವೆ.

ಗುತ್ತಿಗೆದಾರರಿಗೆ ಅಂತಿಮ ಬಿಲ್ಲುಗಳ ಪಾವತಿಯನ್ನು ಮಾಡುವ ಮುನ್ನ ಶೇಕಡ 100ರಷ್ಟು ಅಳತೆ ಪರಿವೀಕ್ಷಣೆ ನಡೆಸಲು ಹಾಗೂ ಪರಿವೀಕ್ಷಣೆಯಲ್ಲಿ ಪೈಪುಗಳನ್ನು ಅಳವಡಿಸಲು ತೋಡಿರುವ ಆಳ ಮತ್ತು ಮಣ್ಣಿನ ಗುಣಮಟ್ಟದ ವರ್ಗೀಕರಣದಲ್ಲಿ ವ್ಯತ್ಯಾಸವಿದ್ದು, ಅಕ್ರಮವಾಗಿ ಅಳತೆಗಳನ್ನು ನಮೂದಿಸಿರುವುದು ಕಂಡುಬಂದಲ್ಲಿ ಈ ಬಗ್ಗೆ ಅಗತ್ಯ ವಸೂಲಾತಿಯನ್ನು ಮಾಡುವಂತೆ ಹಾಸನ ಮತ್ತು ಚನ್ನರಾಯಪಟ್ಟಣ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳಿಗೆ ಸರ್ಕಾರದಿಂದ ಆದೇಶ ನೀಡಲಾಗಿರುತ್ತದೆ. ಅಲ್ಲದೆ, ಈ ರೀತಿ ಅಕ್ರಮ ನಡೆದಿದ್ದರೆ ಈ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಹಾಗೂ ಇದಕ್ಕೆ ಜವಾಬ್ದಾರರಾದವರ ಮೇಲೆ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ಶಿಫಾರಸ್ಸು ಮಾಡುವಂತೆ ನಿರ್ದೇಶನ ನೀಡಲಾಗಿರುತ್ತದೆ. ಈ ಬಗ್ಗೆ ಅಂತಿಮ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

ಈ ನಡುವೆ, ಶ್ರೀ ಆರ್. ಮಹದೇವ್, ಆಗಿನ ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ಯೋಜನಾ ಮೇಲ್ವಿಚಾರಣಾ ಘಟಕ, ವಿಶ್ವಬ್ಯಾಂಕ್ ಯೋಜನೆ, ಹಾಸನ, (25–8–2000 ರಿಂದ 30–6–2001) ಇವರ ವಿರುದ್ಧ ಈ ಕೆಳಕಂಡ ಲೋಪಗಳಿಗಾಗಿ ಕ್ರಮ ಕೈಗೊಳ್ಳಲಾಗಿದೆ.

1) ಕಾಮಗಾರಿಗಳಿಗೆ ಪಾವತಿಯನ್ನು ಮಾಡುವಾಗ ನಿಯಮಾನುಸಾರ ಶೇಕಡಾ 10ರಷ್ಟು ಚೆಕ್ ಮೆಷರ್‌ಮೆಂಟ್ ಮಾಡಿರುವುದು ದಾಖಲೆಗಳ ಪ್ರಕಾರ ಕಂಡು ಬಂದಿರುವುದಿಲ್ಲ ಮತ್ತು

2) ಗುತ್ತಿಗೆದಾರರಿಗೆ ಹಿಡಿದಿಟ್ಟ ಮೊತ್ತವನ್ನು ಬಿಡುಗಡೆ ಮಾಡುವ ಮೊದಲು ನ್ಯೂನತಾ ಹೊಣೆಗಾರಿಗೆ ಪ್ರಮಾಣ ಪತ್ರ (Defect Liability Certificate) ವನ್ನು ನೀಡದಿರುವುದು.

ದಿನಾಂಕ 16-5-2003 ರಂದು ಶ್ರೀ ಆರ್. ಮಹದೇವ್, ರವರಿಗೆ ಆಪಾದನೆ ಪತ್ರ (ಚಾರ್ಜ್‌ಶೀಟ್) ವನ್ನು ಜಾರಿಗೊಳಿಸಲಾಗಿರುತ್ತದೆ.

ಶ್ರೀ ಬಿ. ಶಿವರಾಮು: ಮಾನ್ಯ ಅಧ್ಯಕ್ಷರೆ ಸರ್ಕಾರದ ಉತ್ತರ ಬಂದಿದೆ, ಎಲ್ಲಾ ಮಾಹಿತಿಯ ಲಭ್ಯತೆ ಇದೆ. ವಾಸ್ತವಿಕವಾಗಿ ಯಾವ ಪ್ರಮಾಣದ ದುರುಪಯೋಗ ಆಗಿದೆ ಎನ್ನತಕ್ಕಂತಹ ಅಂಕಿಅಂಶಗಳನ್ನು ಬಹಳ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಒಂದು ವಿಚಾರವೆಂದರೆ, ಮೂಲ ಗುತ್ತಿಗೆಯ ಮೊತ್ತ 1390.28 ಲಕ್ಷ ರೂಪಾಯಿಗಳು, ಪರಿಷ್ಕೃತ ಅಂದಾಜು 1732.94 ಲಕ್ಷ ರೂಪಾಯಿಗಳು, ಈಗಾಗಲೇ ಕೊಟ್ಟಿರತಕ್ಕಂತಹ ಹಣ 1607.55 ಲಕ್ಷ ರೂಪಾಯಿಗಳು. ಈ ವ್ಯತ್ಯಾಸಗಳನ್ನು ಗಮನಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸುತ್ತಿದ್ದೇನೆ. ತಾವು ಸ್ಪಷ್ಟವಾಗಿ ಹೇಳಿದ್ದೀರಿ, ಶ್ರೀ ಮಹದೇವ್ ಆಗಿನ ಕಾರ್ಯನಿರ್ವಾಹಕ ಅಭಿಯಂತರರು ಯಾವ ರೀತಿಯ ಹಣವನ್ನು ಬಿಡುಗಡೆ ಮಾಡಿದ್ದಾರೆ ಎಂದು ಇದರಲ್ಲಿ ಸಂಬಂಧಪಟ್ಟ ಇಂಜಿನಿಯರ್ 10 ಪರ್ಸೆಂಟ್ ಚೆಕ್ ಮೆಷರ್‌ಮೆಂಟ್ ಮಾಡದೆಯೇ ಹಣ ಬಿಡುಗಡೆ ಮಾಡಿದ್ದಾರೆ. ಇದರ ಜೊತೆಗೆ ಡಿಫೆಕ್ಟ್ ಲಯಾಬಿಲಿಟಿ ಸರ್ಟಿಫಿಕೇಟ್‌ನ್ನು ಪಡೆಯದೆಯೇ ಗುತ್ತಿಗೆದಾರರಿಗೆ ಇ.ಎಂ.ಡಿ. ಹಣವನ್ನು ಬಿಡುಗಡೆ ಮಾಡಿದ್ದಾರೆ.

ಸೆಕ್ಯೂರಿಟಿ ಡಿಪಾಸಿಟ್ ಹಣವನ್ನು ಬಿಡುಗಡೆ ಮಾಡಿದ್ದಾರೆ. ಎಲ್ಲಾ ಪೂರ್ಣ ಹಣವನ್ನು ಬಿಡುಗಡೆ ಮಾಡಿದ್ದಾರೆ, ವರದಿ ಪ್ರಕಾರ ಇನ್ನೂ ಕೂಡ ಕಾಮಗಾರಿಗಳು ಸರಿಯಾಗಿಲ್ಲ ಎಂಬುದು ಸ್ಪಷ್ಟವಾಗಿದೆ, ಜೊತೆಗೆ ಆಡಿಟ್‌ನವರು ಹೋದ ಸಮಯದಲ್ಲಿ ಎಂ.ಬಿ. ಬುಕ್‌ಗಳೇ ಲಭ್ಯತೆ ಇಲ್ಲ ಎಂದು ಅವರ ಇಲಾಖೆಯವರೇ ಮಾಹಿತಿಯನ್ನೂ ಕೂಡ ಇಲ್ಲೇ ಕೊಟ್ಟಿರತಕ್ಕಂಥದ್ದು ಇದೆ. ಇಷ್ಟಿದ್ದೂ ಆ ಇಂಜಿನಿಯರ ವರ್ತನೆಯ ಬಗ್ಗೆ ನಾನು ಸಾಕಷ್ಟು ಬಾರಿ ತಮ್ಮ ಗಮನಕ್ಕೆ ತಂದಿದ್ದೆ ಅಲ್ಲದೆ ಪತ್ರವನ್ನು ಕೊಟ್ಟಿದ್ದೇನೆ, ತಾವು ಆತನ ಮೇಲೆ ಏನು ಕ್ರಮ ಕೈಗೊಂಡಿದ್ದೀರಾ ಹಾಗೂ ಗುತ್ತಿಗೆದಾರರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಾ? ಇವೆರಡನ್ನೂ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್: ಸನ್ಮನ್ಯ ಅಧ್ಯಕ್ಷರೇ, ಮೊದಲು 1390 ಲಕ್ಷ ರೂ. ಮೊತ್ತ ಇದ್ದದ್ದು 1732.94 ಲಕ್ಷ ರೂರಷ್ಟು ಹೆಚ್ಚಾಗಿದೆ ಏಕೆ ಎಂಬುದು ಸನ್ಮಾನ್ಯ ಸದಸ್ಯರ ಮೂಲ ಪ್ರಶ್ನೆಯಾಗಿದೆ. ಹೆಚ್ಚು ಆಗಲಕ್ಕೆ ಈ ಕಾರಣಗಳಿವೆ, ಈ ಲೋಕೇಷನ್ ಆಫ್ ಓವರ್‌ಹೆಡ್ ಟ್ಯಾಂಕ್ ಮೊದಲು ಎಸ್ಟಿಮೇಟ್ ಮಾಡುವ ಮುನ್ನ ಓವರ್‌ಹೆಡ್ ಟ್ಯಾಂಕ್ ಮಾಡಿರುತ್ತಾರೆ, ಅಲ್ಲಿ ರೈಸಿಂಗ್ ಮೇನ್ ಉದ್ದವಿರುತ್ತದೆ ಅದನ್ನು ಅಳತೆ ತೆಗೆದುಕೊಂಡಿರುತ್ತಾರೆ. ಅಲ್ಲಿ ಲೋಕಲ್ ಪ್ರೆಷರ್ ಮತ್ತು ಬೇರೆ ಕಡೆಗೆ ಓವರ್ ಹೆಡ್ ಟ್ಯಾಂಕ್ ಮಾಡುವಾಗ ಅಲ್ಲಿ ಡಿಸ್ಟೆನ್ಸ್ ಮತ್ತು ರೈಸಿಂಗ್ ಮೇನ್ ಹೆಚ್ಚಾಗುತ್ತದೆ. ಅಲ್ಲಿ ಇಂತಹ ಸ್ಕೀಮ್‌ಗಳೆಲ್ಲಾ ಕೂಡಿ 20 ಲಕ್ಷ 82 ಸಾವಿರ ರೂ. ಹೆಚ್ಚಿಗೆ ಖರ್ಚು ಬಂದಿದೆ. ಎರಡನೆಯದು ಅಡಿಷನಲ್ ಸಂಪು ಮತ್ತು ಪಂಪ್ ಇವುಗಳನ್ನು ಹಾಕಬೇಕು ಎಂದು ಆ 96 ಸ್ಕೀಮ್‌ಗಳೊಂದಿಗೆ ಜೊತೆಗೆ ಅಡಿಷನಲ್ ಆಗಿ ರೂ. 30.29 ಲಕ್ಷ ಸಾವಿರ ಅಡಿಷನಲ್ ಖರ್ಚು ಬಂದಿದೆ. ಅಡಿಷನಲ್ ಓವರ್ ಹೆಡ್ ಬ್ಯಾಂಕ್ ಒಂದು ಲಕ್ಷ ಲೀಟರ್ ಹಿಡಿಯುವಂತಹ ಓವರ್ ಹೆಡ್ ಟ್ಯಾಂಕ್ ಮಾಡಲಿಕ್ಕೆ ಎಸ್ಟಿಮೇಟ್ ಮಾಡಿರುತ್ತಾರೆ, ನಂತರ ಒಂದೂವರೆ ಲಕ್ಷ ಲೀಟರ್ ಹಿಡಿಯುವಂತಹ ಓವರ್ ಹೆಡ್ ಟ್ಯಾಂಕ್ ಮಾಡಬೇಕು ಎಂದು ಮತ್ತೊಮ್ಮೆ ರಿವೈಸ್ಡ್ ಮಾಡುತ್ತಾರೆ

ಹಾಗಾಗಿ ಅಲ್ಲಿ 33 ಲಕ್ಷ 44 ಸಾವಿರ ರೂ. ಅಡಿಷನಲ್ ಖರ್ಚು ಬಂದಿದೆ. ಆಮೇಲೆ ಡಿಸ್ಟೆನ್ಸ್ ಲೈನ್ ಮೊದಲು 50 ಅಡಿ ಇದ್ದರೆ ಮತ್ತೆ 250–300 ಅಡಿ ಡಿಸ್ಟೆನ್ಸ್ ಹೋಗುತ್ತದೆ ಇಂತಹವೆಲ್ಲಾ ಸಣ್ಣ ಪುಟ್ಟ ಕೆಲಸಗಳು ಎಲ್ಲಾ ಸೇರಿ ಒಟ್ಟು 342.66 ಲಕ್ಷ ರೂ. ಒಟ್ಟು 96 ಸ್ಕೀಮ್‌ಗಳಿಗೆ ಅಡಿಷನಲ್ ವರ್ಕ್ ಬಂದಿದ್ದರಿಂದ ರಿವೈಸ್ ಆಗಿದೆ.

Mr. Speaker:- Just to elicit some information. ಅಷ್ಟೇ ನೀವು ಡಿಟೇಲ್ ಆಗಿ ಉತ್ತರ ಹೇಳಲಿಕ್ಕೆ ಹೋದರೆ ಆಗುವುದಿಲ್ಲ, ನಿನ್ನೆ ಮಂತ್ರಿಗಳು 20 ನಿಮಿಷ ಉತ್ತರವನ್ನೇ ಹೇಳಿದರು.

ಶ್ರೀ ಕೆ.ಬಿ. ಕೋಳಿವಾಡ್: ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ, ಎರಡನೇ ಪ್ರಶ್ನೆಗೆ ಉತ್ತರ ಅಂದರೆ ಅವರು ಪಿ.ಡಬ್ಲ್ಯೂ.ಡಿ. ನೌಕರರಾಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಅವರ ಕಡೆಯಿಂದ ನಾವು ಕಡತವನ್ನು ತರಿಸಿಕೊಂಡು ಕೊಟ್ಟಿದ್ದೇವು. ಅವರು ಪುನಃ ಆ ಕಡತವನ್ನು ದಿನಾಂಕ 7–12–2002 ರಂದು ವಾಪಸ್ಸು ಕಳುಹಿಸಿದ್ದಾರೆ, 17–1–2003 ರಂದು ನಾವು ನಮ್ಮ ಡಿಪಾರ್ಟ್‌ಮೆಂಟ್‌ನಿಂದ, ದಿನಾಂಕ 22–2–2003 ರಂದು CIPET ಸಂಸ್ಥೆಯಿಂದ ಎಲ್ಲಾ ವಿವರಗಳನ್ನು ತರಿಸಿದ್ದೇವೆ. 11–3–2003ಕ್ಕೆ ಎಲ್ಲಾ ಬಂದಿವೆ, 16–5–2003ಕ್ಕೆ ಅವರಿಗೆ ಷೋಕಾಸ್ ನೋಟೀಸ್ ಕೊಟ್ಟಿದ್ದೇವೆ. ಚಾರ್ಜ್ ಫ್ರೇಮ್ ಮಾಡಿದ್ದೇವೆ, ನೋಟೀಸ್ ಕೊಟ್ಟು we are waiting for the reply to take proper action.

ಶ್ರೀ ಬಿ. ಶಿವರಾಮು: ಪರಿಷ್ಕೃತ ಅಂದಾಜು ಇಷ್ಟು ಮಾಡಿಕೊಂಡರೂ ಕೂಡ ಈಗ ಕೊಟ್ಟಿರುವ ವರದಿಯ ಪ್ರಕಾರ ಪೂರ್ಣ ಪ್ರಮಾಣದ ದುರಸ್ತಿ ಆಗಿಲ್ಲ ಎಂದು ತಾವೇ ಹೇಳಿದ್ದೀರಿ, ಎರಡನೆಯದು ಇದೆಲ್ಲಕ್ಕಿಂತ ಹೆಚ್ಚಾಗಿ ತಮ್ಮ ಟೆಂಡರ್‌ನಲ್ಲಿರುವ ಪ್ರಕಾರ ಪೈಪನ್ನು ಒಂದು ಮೀಟರ್ ಆಳದಲ್ಲಿ ಆಳವಡಿಸಬೇಕು ಎಂದು ತಿಳಿಸಿರುವಂತೆ ಆ ರೀತಿ ಮಾಡಿದ್ದಾರೆಯೇ? ಹಾಗೆ ಮಾಡತಕ್ಕಂಥ ಸಂದರ್ಭದಲ್ಲಿ ಕಂಡೀಷನ್ ಆಫ್ ದಿ ಸಾಯಿಲ್ ಮೇಲೆ ಸಾಫ್ಟ್ ರಾಕ್, ಹಾರ್ಡ್ ರಾಕ್ ಎಂದು ಹೆಚ್ಚುವರಿ ಬಿಲ್ಲನ್ನು ತಾವು ಗಮನಿಸಿದ್ದೀರಾ? ಮೂರನೆಯದಾಗಿ ಕಂಟ್ರಾಕ್ಟರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ಕೇಳಿದೆ ಅದರ ಬಗ್ಗೆ ತಾವು ಏನೂ ಹೇಳಿಲ್ಲ, ನಾನು ತಮಗೆ ದಿನಾಂಕ 23–8–2001 ರಂದು ಮೊದಲ ಪತ್ರವನ್ನು ತಮ್ಮ ಇಲಾಖೆಗೆ ಕೊಟ್ಟಿದ್ದೇನೆ. ಸಾಧಾರಣ ಎರಡು ವರ್ಷವಾದರೂ ಯಾವ ಡಿಫೆಕ್ಟ್ ರೆಕ್ಟಿಫೈ ಆಗದ್ದೇನೆ ಮೂರು ಕೋಟಿ ರೂಪಾಯಿ ಹಣ ಹೆಚ್ಚುವರಿಯಾಗಿದೆ ಎಂದರೆ ಇನಿಷಿಯಲ್ ಡೆಪಾಸಿಟ್, ಸೆಕ್ಯೂರಿಟಿ ಡೆಪಾಸಿಟ್‌ನಿಂದ ಹಿಡಿದು ಫುಲ್ ಪೇಮೆಂಟ್ ಮಾಡಿ ಹೋಗಿದ್ದಾರೆ. ಅಂದರೆ ಆ ಇಂಜಿನಿಯರ್ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕು.

ಶ್ರೀ ಕೆ.ಬಿ. ಕೋಳಿವಾಡ್: ಎನ್‌ಕ್ವೈರಿ ಆಗಿದೆ, ಎಲ್ಲಾ ಆಗಿದೆ.

ಶ್ರೀ ಬಿ. ಶಿವರಾಮು: ಅವರಿಗೆ ಬಡ್ತಿ ಕೊಟ್ಟು ಕಳುಹಿಸಿದ್ದೀರೀ ಹೊರತು ಅವರ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಅದರ ವಿಚಾರವೇ ಬೇರೆ ಆಗುತ್ತಿತ್ತು.

ಶ್ರೀ ಕೆ.ಬಿ. ಕೋಳಿವಾಡ್: ತಾವು ಮೊದಲಿಗೆ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿ ಲೋಕಾಯುಕ್ತಕ್ಕೆ ರೆಫರ್ ಮಾಡಬೇಕು ಎಂದು ಹೇಳಿದ್ದಿರಿ. ಮಾನ್ಯ ಮುಖ್ಯಮಂತ್ರಿಗಳು 2001ರಲ್ಲಿ ಲೋಕಾಯುಕ್ತಕ್ಕೆ ರೆಫರ್ ಮಾಡಲಿಕ್ಕೆ ಆದೇಶ ಮಾಡಿದ್ದರು, ಪುನಃ ಅಧಿಕಾರಿಗಳು ಎಲ್ಲಾ

ಡಿಫಕ್ಟ್ಸ್‌ನೊಂದಿಗೆ ಮುಖ್ಯಮಂತ್ರಿಗಳಿಗೆ ಕಡತವನ್ನು ಮಂಡಿಸಿದಾಗ ಮುಖ್ಯಮಂತ್ರಿಯವರು ಲೋಕಾಯುಕ್ತಕ್ಕೆ ಕಳುಹಿಸುವ ಅವಶ್ಯಕತೆ ಇಲ್ಲ, ಡಿಫೆಕ್ಟ್ಸ್ ಎಲ್ಲವನ್ನೂ ಸರಿ ಮಾಡಿಸಿ ಎಂದು ಆದೇಶ ನೀಡಿದರು. ಆ ಆದೇಶ ಬಂದ ಮೇಲೆ ನಾನು ಮಂತ್ರಿಯಾದ ಮೇಲೆ ತಾವು ಒಂದು ಪತ್ರ ಕೊಟ್ಟಿದ್ದೀರಿ. ಎಂಟು ದಿವಸದೊಳಗಾಗಿ ತಮ್ಮನ್ನು, ಎಲ್ಲಾ ಅಧಿಕಾರಿಗಳನ್ನು ಸೇರಿಸಿ ನಾನು ಒಂದು ಸಭೆ ಮಾಡಿದೆ, ಏನೇನು ಡಿಫೆಕ್ಟ್ಸ್ ಇದೆ ಎಂದು ಎಲ್ಲಾ ಒಂದು ಪಟ್ಟಿ ಮಾಡಿದೆವು, ಎರಡು ತಿಂಗಳೊಳಗಾಗಿ ಅಲ್ಲಿರುವ ಡಿಫೆಕ್ಟ್ಸ್‌ನೆಲ್ಲಾ ರೆಕ್ಟಿಫೈ ಮಾಡಬೇಕೆಂದು ನಾವು ನಿರ್ಣಯಿಸಿದೆವು. ಅದರ ಸಲುವಾಗಿ ಇನ್ನೊಂದು ಸಭೆ ಮಾಡಿ ಆ ಡಿಫೆಕ್ಟ್ಸ್‌ನ್ನೆಲ್ಲಾ ಸರಿ ಮಾಡಲಿಕ್ಕೆ 1.08 ಲಕ್ಷ ರೂ. ಮತ್ತು 24.28 ಲಕ್ಷ ರೂಪಾಯಿಗಳನ್ನು ಅಡಿಷನಲ್ ಆಗಿ ವೆಚ್ಚ ಮಾಡಲಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದ ಸದಸ್ಯರೇ ವಿಚಾರಣೆ ಆಗಲಿ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಎರಡು ಆದೇಶಗಳನ್ನು ಕಳುಹಿಸಿದ್ದಾರೆಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ.

ಅಧ್ಯಕ್ಷರು: ಅವರು ಹೇಳುತ್ತಾರೆ ಬಿಡಿ.

ಶ್ರೀ ಕೆ.ಬಿ. ಕೋಳಿವಾಡ್: ಬಚ್ಚೇಗೌಡರೇ, ನಾನು ಉತ್ತರಿಸಿದ ನಂತರ ತಮ್ಮ ಪ್ರಶ್ನೆಯನ್ನು ಕೇಳಿ, ನಾವು ಎಲ್ಲಾ ಕಂಟ್ರಾಕ್ಟ್‌ದಾರರಿಗೆ ಪೂರ್ತಿ ಪೇಮೆಂಟ್ ಮಾಡಿಲ್ಲ, ಫೈನಲ್ ಬಿಲ್ ಮಾಡಿಲ್ಲ, ಇನ್ನು ಹೆಚ್ಚುವರಿ ಒಂದು ಕೋಟಿ ರೂಪಾಯಿ ಹೆಚ್ಚು ಹಣ ಡಿಪಾಸಿಟ್ ವಗೈರೆ ನಮ್ಮಲ್ಲಿದೆ. ಇನ್ನೂ ಪೈಪ್‌ಲೈನ್ ಆಳ ತೆಗೆಯಬೇಕು ಇನ್ನೂ ತೆಗೆದಿಲ್ಲ, ಎಲ್ಲೆಲ್ಲಿ ಪೈಪ್‌ಲೈನ್ ಆಳ ತೆಗೆಸಬೇಕು ಎಂದು ಇನ್‌ವೆಸ್ಟಿಗೇಷನ್ ಮಾಡಿಸಿದ್ದೇವೆ. ಅದರ ಬೆಲೆ ಎಷ್ಟಾಗುತ್ತದೆ ಅಷ್ಟನ್ನು ಆಯಾಯ ಕಂಟ್ರಾಕ್ಟ್‌ದಾರರ ಕಂಟ್ರಾಕ್ಟ್ ಡಿಪಾಸಿಟ್ ಮೊತ್ತದಿಂದ ಡಿಡಕ್ಟ್ ಮಾಡಿಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ: ಇದು ಮೂರು ಕೋಟಿ ರೂಪಾಯಿ ಹೆಚ್ಚಿಗೆ ಖರ್ಚಾಗಿರುವಂಥಾದ್ದು ಇದನ್ನು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ಒಪ್ಪಿಸಿ, ಅಲ್ಲಿ ಅವರು ತನಿಖೆ ಮಾಡಿ ವರದಿ ಕೊಡಲಿ ಅದಕ್ಕೆ ದಯವಿಟ್ಟು ಸರ್ಕಾರ ಒಟ್ಟಿಗೆ ಕೊಡಬೇಕು, ತಾವು ಅಧ್ಯಕ್ಷರು ಅದಕ್ಕೆ ಆಜ್ಞೆ ಮಾಡಬೇಕು ಎಂದು ನಾನು ವಿನಂತಿಸುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್: ಮೂರು ಕೋಟಿ ರೂಪಾಯಿ ಹೆಚ್ಚುವರಿ ಖರ್ಚಾಗಿದೆ, ಮೂರು ಕೋಟಿ ರೂಪಾಯಿ ಅವ್ಯವಹಾರ ಆಗಿದೆ ಎಂದಲ್ಲ, ಯಾವ್ಯಾವುದಕ್ಕೆ ಖರ್ಚಾಗಿದೆ ಎಂದು ನಾನು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ: ದಯವಿಟ್ಟು ಅದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸುತ್ತೀರಾ ಇಲ್ಲವೇ ಎಂಬುದಕ್ಕೆ ಉತ್ತರ ಕೊಡಿ.

ಅಧ್ಯಕ್ಷರು: ಮಾನ್ಯ ಶಿವರಾಮ್ ರವರೇ, ಕೊನೆಯ ಪ್ರಶ್ನೆ ಕೇಳಿ, ನೋಡಿ 7 ನಿಮಿಷ ಅಯಿತು.

ಶ್ರೀ ಸಿ. ಬೈರೇಗೌಡ: ಎಲ್ಲಾ ಕಡೆ ಅವ್ಯವಹಾರ ನಡೆದಿರುವುದರಿಂದ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸಿ.

ಅಧ್ಯಕ್ಷರು: ಮಾನ್ಯ ಕೋಳಿವಾಡ್‌ರವರೇ, ಇದನ್ನು ಗಂಭೀರವಾಗಿ ಏನು ಮಾಡಬೇಕು ಅದನ್ನು ಕಾನೂನು ಪ್ರಕಾರ ಮಾಡಿ.

ಶ್ರೀ ಪಿ. ಬೈರೇಗೌಡ: ತಮಗೆ ಅಧಿಕಾರ ಇದೆ ಮಾನ್ಯ ಅಧ್ಯಕ್ಷರೇ, ತಾವು ಒಪ್ಪಿಸಬೇಕು ಈ ವಿಚಾರವನ್ನು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ಒಪ್ಪಿಸಿ ಎಂದು ಹೇಳುವ ಅಧಿಕಾರ ತಮಗಿದೆ, ದಯವಿಟ್ಟು ತಮ್ಮ ಅಧಿಕಾರವನ್ನು ಉಪಯೋಗಿಸಬೇಕು.

Mr. Speaker: I will examine it.

ಶ್ರೀ ಕೆ.ಬಿ. ಕೋಳಿವಾಡ್: ಶ್ರೀ ಬೈರೇಗೌಡರು ಹೇಳಿರುವ ಹಾಗೆ ಮೂರು ಕೋಟಿ ರೂಪಾಯಿ ಅವ್ಯವಹಾರವಾಗಿದೆಯೆನ್ನುವುದು ಸತ್ಯಕ್ಕೆ ದೂರವಾದ ಸಂಗತಿ, ಆದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ಕೈಗೊಳ್ಳಬೇಕಾಗಿತ್ತು, ಆದರೆ ನನ್ನ ಕಡೆ ಆ ಅಧಿಕಾರವಿಲ್ಲ, ಪಿ.ಡಬ್ಲ್ಯೂ.ಡಿಗೆ ಕಳುಹಿಸಿದ್ದೇವೆ. ಈಗ ನನ್ನ ಕಡೆ ಅಧಿಕಾರ ಬಂದಿದೆ, ನಾನು ಅವರಿಗೆ ಷೋಕಾಸ್ ನೋಟಿಸ್ ಕೊಟ್ಟಿದ್ದೇನೆ. ಒಂದು ಸಾರಿ ಅಥವಾ ಎರಡು ಸಾರಿ ಅವಕಾಶವನ್ನು ಕೊಡುತ್ತೇನೆ, ಉತ್ತರ ಬರಲಿಲ್ಲ ಅಂದರೆ ಎಕ್ಸ್‌ಪಾರ್ಟಿ ಎಂದು ತೆಗೆದುಕೊಂಡು appropriate action will be taken.

ಗುಳೇದಗುಡ್ಡದ ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡ ಕುರಿತು

373(2695): ಶ್ರೀ ನಂಜಯ್ಯನ ಮಠ್ ಎಸ್.ಜಿ. (ಗುಳೇದಗುಡ್ಡ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಳೇದಗುಡ್ಡದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಯಾವ ಕಟ್ಟಡಗಳಲ್ಲಿ ಜರುಗುತ್ತಿವೆ;

ಆ) ಕಟ್ಟಡಗಳ ಮಾಲೀಕತ್ವವು ಮೊದಲು ಪುರಸಭೆಯ ವಶದಲ್ಲಿತ್ತೆ;

ಇ) 1973ರಲ್ಲಿ ಆಗಿನ ಪುರಸಭೆಯವರು ಸದರಿ ಕಟ್ಟಡಗಳನ್ನು ಬೇರೆಯವರಿಗೆ ದಾನ ಮಾಡಿರುವುದು ನಿಜವೇ;

ಈ) ಪುರಸಭೆಯವರು ಬೇರೆಯವರಿಗೆ ದಾನ ಮಾಡುವ ಪೂರ್ವ, ಸರ್ಕಾರದ ಅನುಮತಿ ಪಡೆದಿದ್ದಾರೆಯೇ?

ಶ್ರೀ ಪ್ರೋ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಳೇದಗುಡ್ಡ ಇದು ಸಿ.ಟಿ.ಎಸ್. ನಂ. 2206ಎ ಕಟ್ಟಡದಲ್ಲಿ ಹಾಗೂ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯು 227ಎ 1ಬಿ ಹಾಗೂ 227ಎ 1ಸಿ ಕಟ್ಟಡಗಳಲ್ಲಿ ಜರುಗುತ್ತಿವೆ.

ಆ) ಇಲ್ಲ.

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರೊ ಬಿ.ಕೆ. ಚಂದ್ರಶೇಖರ್: ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನೇರವಾಗಿ ನಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲವೆಂದು ನಾನು ಹೇಳುತ್ತೇನೆ. ಬಹುಶಃ ಮಾನ್ಯ ಸದಸ್ಯರು ಬೇರೆ ಇಲಾಖಾ ಸಚಿವರಿಗೆ ಆ ಪ್ರಶ್ನೆಯನ್ನು ಉದ್ದೇಶಿಸಿದ್ದರು ಎಂದು ನನಗೆ ಅನ್ನಿಸುತ್ತಿದೆ, ಇದಕ್ಕೆ ಬೇಕಾದ ಮಾಹಿತಿ ನಿನ್ನೆ, ಮೊನ್ನೆ ಹುಡುಕಾಡಿದೆವು ಆದರೆ ಆ ಮಾಹಿತಿ ಸಿಕ್ಕಿಲ್ಲ.